## ಸಿವಿಲ್ ಜಡ್ಜ ಹಾಗೂ ಜೆ.ಎಂ.ಎಫ್.ಸಿ. ಮುಂಡಗೋಡರವರ ನ್ಯಾಯಾಲಯದಲ್ಲಿ.

ಸಿ.ಸಿ. ನಂಬರ 174/2018

ಸಿಡಬ್ಲ್ಯೂ-5/ ಪಿಡಬ್ಲ್ಯೂ-4

| | | |
|---|---|---|
| ಸಾಕ್ಷಿದಾರರ ಹೆಸರು | ಃ | ರಾಮಚಂದ್ರ |
| ತಂದೆ ಹೆಸರು | ಃ | ಆದೂ ಜಾಧವ |
| ವಯಸ್ಸು | ಃ | 35 ವರ್ಷ |
| ವೃತ್ತಿ | ಃ | ಕೂಲಿ ಕೆಲಸ |
| ವಾಸ್ತವ್ಯ | ಃ | ಇಂಚಗೇರಿ, ವಿಜಯಪುರ. |

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 11-03-2025.

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ**

ಈ ಪ್ರಕರಣದ ಬಗ್ಗೆ ನನಗೆ ಏನೂ ತಿಳಿದಿಲ್ಲ. ನನಗೆ 1 ನೇ ಆರೋಪಿಯ ಪರಿಚಯ ಇದೆ. 1 ನೇ ಆರೋಪಿ ನನ್ನ ಅಣ್ಣನ ಮಗ. 2 ನೇ ಆರೋಪಿ ನನ್ನ ಮಾವ. ನಾನು ಯಾರ ಸಮಕ್ಷಮ ಯಾವ ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ನಾನು ಯಾವುದೇ ಅಪಘಾತವನ್ನು ನೋಡಿರುವುದಿಲ್ಲ.

**(ಸಾಕ್ಷಿಯು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎ.ಪಿ.ಪಿ. ರವರು ಕೋರಿದ ಮೇರೆಗೆ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಃ ಮಾನ್ಯ ಎಪಿಪಿ ರವರಿಂದ.**

ದಿಃ 25-01-2018 ರಂದು ನಾನು ವಿಜಯಪುರದಿಂದ ಮುಂಡಗೋಡಿಗೆ ಬಂದಿದ್ದೆನು ಎಂದರೆ ಸರಿ. ನಾನು ಸದರಿ ವಿಷಯವನ್ನು 1 ನೇ ಆರೋಪಿಗೆ ತಿಳಿಸಿದ್ದ ಕಾರಣ ಅವರು ನನ್ನನ್ನು ತಮ್ಮಾನಕೊಪ್ಪಕ್ಕೆ ಕರೆದುಕೊಂಡು ಹೋಗಲು ಮೋಟಾರ ಸೈಕಲನ್ನು ತಂದಿದ್ದರು ಎಂದರೆ ಸರಿ. ಬಸ್ ನಿಲ್ದಾಣದಿಂದ ನಾನು ಮತ್ತು 1 ನೇ ಆರೋಪಿ ತಮ್ಮಾನಕೊಪ್ಪಕ್ಕೆ ಹೊರಟೆವು ಮತ್ತು ದ್ವಿಚಕ್ರ ವಾಹನವನ್ನು 1 ನೇ ಆರೋಪಿ ಚಲಾಯಿಸುತ್ತಿದ್ದರು ಎಂದರೆ ಸರಿ. ಚೌಡಳ್ಳಿ ಊರಿಗೆ ಹೋಗುವ ಕ್ರಾಸ್ ಹತ್ತಿರ ತಲುಪಿದಾಗ 1 ನೇ ಆರೋಪಿಯು ಅತಿವೇಗ ಮತ್ತು ನಿರ್ಲಕ್ಷತನದಿಂದ ಸವಾರಿ ಮಾಡಿಕೊಂಡು ಹೋಗಿ, ಯಾವುದೇ ಸಿಗ್ನಲ್ ತೋರಿಸದೆ ಮೋಟಾರ ಸೈಕಲನ್ನು ಒಮ್ಮೆಲೆ ಚೌಡಳ್ಳಿ ಊರಿನ ಕಡೆಗೆ ತಿರುಗಿಸಿದ ಎಂದರೆ ಸರಿಯಲ್ಲ. ಹಾಗೆ ದ್ವಿಚಕ್ರ ವಾಹನವನ್ನು ತಿರುಗಿಸಿದಾಗ ಶಿರಸಿ ಕಡೆಯಿಂದ ಬರುತ್ತಿದ್ದ ಮೋಟಾರ ಸೈಕಲಿಗೆ 1 ನೇ ಆರೋಪಿ ಡಿಕ್ಕಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಆರೋಪಿಯ ಮೋಟಾರ ಸೈಕಲ್ ನಂ. KA31/W-7280 ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಅಪಘಾತವಾದ ನಂತರ ಎರಡು ವಾಹನಗಳಲ್ಲಿ ಸವಾರಿ ಮಾಡುತ್ತಿದ್ದ ಎಲ್ಲರೂ ಕೆಳಗೆ ಬಿದ್ದಿದ್ದು ನಮ್ಮೆಲ್ಲರಿಗೂ ಗಾಯಗಳಾಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ನಮ್ಮೆಲ್ಲರನ್ನೂ ಮುಂಡಗೋಡ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದರು ಎಂದರೆ ಸರಿ. ಅಲ್ಲಿಂದ ನನ್ನೊಬ್ಬನನ್ನು ಬಿಟ್ಟು

ಉಳಿದವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಕಿಮ್ಸ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ಸರಿ. ಅಪಘಾತದಲ್ಲಿ ಗಾಯಗೊಂಡ ಕಾರಣ ನನ್ನನ್ನು ಆಸ್ಪತ್ರೆಗೆ ಸೇರಿಸಿದ್ದರು. ಸದರಿ ಸಮಯಕ್ಕೆ ನನಗೆ ಪ್ರಜ್ಞೆ ಇರಲಿಲ್ಲ. ನಾನು ಹೇಳಿದ ಅಪಘಾತ ಹೇಗೆ ಸಂಭವಿಸಿರುತ್ತದೆ ಎಂದು ನನಗೆ ಗೊತ್ತಿಲ್ಲ. ಈಗ ಸಾಕ್ಷಿಗೆ ಓದಿ ಹೇಳಿದ ರೀತಿಯಲ್ಲಿ ದಿಃ 22-03-2018 ರಂದು ಅವರು ಪೊಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನಾನು ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಪೊಲೀಸರ ಮುಂದೆ ದಿಃ 22-03-2018 ರಂದು ನೀಡಿದ ಹೇಳಿಕೆಯ ಆಯ್ದು ಭಾಗವನ್ನು ಅಂದರೆ ನಾವು ಚೌಡಳ್ಳಿ ಊರಿಗೆ ಹೋಗುವ ಕ್ರಾಸ್ ಹತ್ತಿರ ________ ಕಿವಿಯಿಂದ ರಕ್ತ ಬರುತ್ತಿತ್ತು ಎನ್ನುವ ಭಾಗವನ್ನು ನಿಪಿ4 ಎಂದು ಗುರುತಿಸಲಾಯಿತು. 1 ನೇ ಆರೋಪಿ ನನ್ನ ಅಣ್ಣನ ಮಗನಾಗಿದ್ದರಿಂದ ಮತ್ತು 2 ನೇ ಆರೋಪಿ ನನ್ನ ಮಾವನಾಗಿದ್ದರಿಂದ ಅವರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ನನ್ನ ಕಣ್ಣಮುಂದೆ ಸಂಭವಿಸಿದ್ದರೂ ಸಹ, ಸದರಿ ಅಪಘಾತವನ್ನು 1 ನೇ ಆರೋಪಿಯು ಮಾಡಿರುತ್ತಾನೆ ಮತ್ತು ಅವನ ತಪ್ಪಿನಿಂದ ಆಗಿರುತ್ತದೆ ಎಂದು ತಿಳಿದಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.</u>**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

**ಓ .ಹೇ.ಕೇ. ಸರಿ ಇದೆ**

**-Sd-**

**ಪ್ರದ.ನ್ಯಾದಂ.ಮುಂಡಗೋಡ.**